ಈ ದಿನ ದಿನಾಂಕಃ 19.11.2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಮುಂದುವರೆದ ಪಾಟೀಸವಾಲು ಪ್ರತಿವಾದಿ ಪರ ಶ್ರೀ ವೈ ಎಂ ಆರ್ ವಕೀಲರಿಂದಃ</u>**

9. ನಿಪಿ1 ರಲ್ಲಿ ಅಳತೆ ಹಾಗೂ ಚೆಕ್ಕುಬಂದಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ 1 ರಲ್ಲಿ ಅಳತೆ ಹಾಗೂ ಚೆಕ್ಕುಬಂದಿಯನ್ನು ತೋರಿಸುವಂತೆ ದಾಖಲೆಯನ್ನು ನೀಡಿದಾಗ ನೋಡಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ನಿಪಿ 2 ರಲ್ಲಿ ವಿಸ್ತೀರ್ಣ ಹಾಗೂ ಚೆಕ್ಕುಬಂದಿ ಇರುವುದಿಲ್ಲ ಎಂದರೆ ಸರಿ. 1989 ರಿಂದ ನಿಪಿ 4 ಆಗುವವರೆಗೂ ಮಾರಾಟಗಾರರ ಹೆಸರಿಗೆ ಖಾತೆ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿ ದಾಖಲೆಯನ್ನು ನಾನು ನೋಡಿರುವುದಿಲ್ಲ. ಹಕ್ಕು ಪತ್ರವನ್ನು ಹೊರತುಪಡಿಸಿ ಬೇರೆ ದಾಖಲೆಯನ್ನು ನ್ಯಾಯಾಲಯಕ್ಕೆ ಪಡೆದು ಸಲ್ಲಿಸಲು ಯಾವುದೇ ಸಮಸ್ಯೆ ಇರಲಿಲ್ಲ ಎಂದರೆ ಸರಿ.

10. ಯಾವ ವರ್ಷದಲ್ಲಿ ಮಾರಾಟಗಾರರಿಗೆ ಖಾತೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಹಾಗೂ ನಾನು ಯಾವುದೇ ದಾಖಲೆಯನ್ನು ನೊಡಿರುವುದಿಲ್ಲ. ನಿಪಿ 4ನ್ನು ಬರೆದುಕೊಡುವ ಕಾಲಕ್ಕೆ ಬಸವರಾಜಪ್ಪ ಬಿನ್ ನಿಂಗಪ್ಪ ನಿಪಿ 4 ರ ಚೆಕ್ಕುಬಂದಿಯಲ್ಲಿ ನಮೂದಿಸಿರುವ ಆಸ್ತಿಯಲ್ಲಿ ಸ್ವಾಧೀನದಲ್ಲಿರಲಿಲ್ಲ ಎಂದರೆ ಸರಿಯಲ್ಲ. ಬಸವರಾಜಪ್ಪ ಕೂಲಿ ಕೆಲಸ ಮಾಡುತ್ತಾರೆ. ಬಸವರಾಜಪ್ಪ ಶಿವಕುಳೆನೂರಿನಲ್ಲಿ ಇದ್ದರು. ಎದುರುದಾರರಿಗೆ ದಾವಾ ಆಸ್ತಿ ಪಂಚಾಯಿತಿ ದಾಖಲೆಗಳ ಪ್ರತಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

11. ಪ್ರತಿವಾದಿ ದಾವಾ ಆಸ್ತಿಯಲ್ಲಿ ಸುಮಾರು 30 ವರ್ಷಗಳಿಂದ ಸ್ವಾದೀನದಲ್ಲಿದ್ದಾರೆಂದು ದಿಃ 24.02.2018 ರಂದು ಅಧಿಸೂಚನೆಯಂತೆ ಹೊರಡಿಸಿ ಹಕ್ಕುಪತ್ರವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಕಾಕನೂರು ಪಂಚಾಯಿತಿ ಅಧಿಕಾರಿ ಹಕ್ಕುಪತ್ರಗಳನ್ನು 44 ಜನರಿಗೆ ಅಧಿಸೂಚನೆಯಂತೆ ವಿತರಣೆ ಮಾಡಿ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಕ್ಕುಪತ್ರ ಮನೆಗೆ ನೀಡಿರುತ್ತಾರೆಂದು ನುಡಿಯುತ್ತಾರೆ. ಮನೆಗೆ ಸಂಬಂದಿಸಿದಂತೆ ಪ್ರಸ್ತುತ ದಾವೆಯ ಪ್ರತಿವಾದಿಗೆ ಹಕ್ಕುಪತ್ರವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ನೀಡಿದ ಹಕ್ಕುಪತ್ರ ದಾಖಲೆಯನ್ನು ಪಂಚಾಯಿತಿಯಲ್ಲಿ ನಾನು ನೋಡಿರುತ್ತೇನೆ. ಪ್ರತಿವಾದಿಯ ಆದಾರ್ ಕಾರ್ಡ್, ಪಡಿತರ ಚೀಟಿಯಲ್ಲಿ

ದಾವಾ ಆಸ್ತಿಯ ವಿಳಾಸ ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಶಿವಕುಳೆನೂರು ಗ್ರಾಮದವರು ಎಂದರೆ ಸರಿ.

12. ನಾನಾಗಲೀ ನನಗೆ ಮಾರಾಟ ಮಾಡಿದವರಾಗಲೀ ದಾವಾ ಆಸ್ತಿಯಲ್ಲಿ ಎಂದಿಗೂ ಸ್ವಾದೀನದಲ್ಲಿರಲಿಲ್ಲ ಎಂದರೆ ಸರಿಯಲ್ಲ. ನಾನು ಬಸವರಾಜಪ್ಪನೊಂದಿಗೆ ಶಾಮಿಲ್ ಆಗಿ ನಿಪಿ 4ನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ನ ಚೆಕ್ಕುಬಂದಿ ಹಾಗೂ ನಿಪಿ 3 ರಲ್ಲಿರುವ ಹಕ್ಕು ಪತ್ರದ ಚೆಕ್ಕುಬಂದಿಯನ್ನು ಆಯುಕ್ತರನ್ನು ನೇಮಕ ಮಡಿ ವಸ್ತು ಸ್ದಿತಿ ಅಳತೆಯನ್ನು ತಿಳಿಯಲು ಯಾವುದೇ ಸಮಸ್ಯೆ ಇರುವುದಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.